ಒಂದಾಣೆ ಮಾಲೆ 239

# ಸರ್ವಜ್ಞ ವಚನಗಳು

## (ಭಾಗ ೨)

❋

ಸಂಗ್ರಾಹಕರು:
ಶ್ರೀ| ಕುಡ್ವ ವಾಸುದೇವ ಶೆಣೈ,
ಮಂಗಳೂರು.

1959

❋

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

## ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1959ನೇ ಜೂನ್ ತಿಂಗಳ ಮೂರನೆಯ ವಾರದ ವರೆಗೆ 239 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕವು ಹೊರಡುತ್ತಲೇ ಇದೆ.

239 ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 4663 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆ ಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ 'ಒಂದಾಣೆ ಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಆವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

# ಸರ್ವಜ್ಞ ವಚನಗಳು

## (ಭಾಗ ೨)

ತೋರಿದ ಕುಲಗಿರಿಯು । ಮೀರಿ ತಪದೊಳಗಿರ್ದು ।
ಬೇರೊಂದು ಮನವನೆಳಸಿದರೆ ಬೆಳೆದ ಹೊಲ ।
ಸೂರೆಹೋದಂತೆ, ಸರ್ವಜ್ಞ ॥ ೧೦೫ ॥

ಕೋಳಿಕೂಗದ ಮುನ್ನ । ಏಳುವನು ಭಕ್ತಿಂದ ।
ಭಾಳಲೋಚನನರ್ತಿಯಿಂ ನೆನೆದರೆ ।
ಆಳಿನಾಳಯ್ಯ, ಸರ್ವಜ್ಞ ॥ ೧೦೬ ॥

ಎಂಜಲು ಅಶೌಚ । ಸಂಜೆಯೆಂದೆನಬೇಡ ।
ಕುಂಜರನು ವನವ ನೆನೆವಂತೆ ನೀನು ನಿ ।
ರಂಜನನ ನೆನೆಯೊ, ಸರ್ವಜ್ಞ ॥ ೧೦೭ ॥

ತೆಪ್ಪವ ನಂಬಿದರೆ । ತಪ್ಪದೆ ತಡಿಗೆತಹುದು !
ಸರ್ಪಭೂಷಣನ ನಂಬಿದರೆ ಭವವಾಲೆ ।
ತಪ್ಪಿ ಬದುಕುವನು, ಸರ್ವಜ್ಞ ॥ ೧೦೮ ॥

ಅರ್ಥಿಗೆ ಬೆಲೆಯಿಲ್ಲ । ಚಿತ್ತಕ್ಕೆ ಹೊಲೆಯಿಲ್ಲ ।
ಬೆತ್ತಲಿದ್ದವಗೆ ಭಯವಿಲ್ಲ ಯೋಗಿಗೆ ।
ಕತ್ತಲೆಯಿಲ್ಲ, ಸರ್ವಜ್ಞ ॥ ೧೦೯ ॥

ಯೋಗಿಗೆ ಹೊಲೆಯಿಲ್ಲ । ಸಾಗರಕೆ ನೆಲೆಯಿಲ್ಲ ।
ಯೋಗವಟ್ಟೆಗ್ಗೆ ಹೊಳನಿಲ್ಲ ಜ್ಞಾನಿಗೆ ।
ರಾಗದ್ವೇಷಿಲ್ಲ, ಸರ್ವಜ್ಞ ॥ ೧೧೦ ॥

ಕುರಿ ಕಬ್ಬಿನೊಳು ಪೊಕ್ಕು । ಅರಿವುದೆ ತನಿರಸವ ।
ಹೊರಗಿನ ಸೋಗೆ ಸುಲಿವಂತೆ ತತ್ತ್ವದ ।
ಕುರುಹಿಲ್ಲದವಗೆ, ಸರ್ವಜ್ಞ ॥ ೧೧೧ ॥

ಹರನಿಷ್ಠೆಯಿಲ್ಲದ । ಪರಮ ಋಷಿ ಮುಖ್ಯನೆ ।
ಹರನಿಷ್ಠೆಯುಳ್ಳ ಶ್ವಪಚನಾದೊಡೆ ಆತ ।
ಪರಮ ಋಷಿ ಕಾಣೊ, ಸರ್ವಜ್ಞ ॥ ೧೧೨ ॥

ಜಾತಿಹೀನರ ಮನೆಯ । ಜ್ಯೋತಿ ತಾ ಹೀನವೇ ।
ಜಾತಿಯೇ ಜಾತಿಯೆನಬೇಡ ಶಿವನೊಲಿ ।
ದಾತನೆ ಜಾತ, ಸರ್ವಜ್ಞ ॥ ೧೧೩ ॥

ಮುಟ್ಟುವು ಕಂಡವರು । ಮುಟ್ಟಲಮ್ಮರು ನೋಡ !
ಮುಟ್ಟವೆ ತಡೆದು ತಾನಾದ ದೇಹವನು ।
ಮುಟ್ಟರ್ಯಾಕಯ್ಯ, ಸರ್ವಜ್ಞ ॥ ೧೧೪ ॥

ಮುಟ್ಟಾದ ಹೊಲೆಯೊಳು । ಹುಟ್ಟಿದರು ಹಾರುವರು ।
ಮುಟ್ಟಬೇಡೆಂದು ತೊಲಗುವರು ಹಾರುವರು ।
ಹುಟ್ಟಿದರೆಲ್ಲಿಂದ, ಸರ್ವಜ್ಞ ॥ ೧೧೫ ॥

ಎಂಜಲೆಂಜಲು ಎಂದು । ಅಂಜುವರು ವಿಪ್ರರು !
ಎಂಜಲಿಂದಾದ ತನುವಿರಲು ಅದನರಿಯ ।
ದಂಜುವರು ನೋಡು, ಸರ್ವಜ್ಞ ॥ ೧೧೬ ॥

ಎಲ್ಲಾರು ಶಿವನರಿಯೆ । ಯಿಲ್ಲ ತಾ ಹಾಳಕ್ಕು ।
ಎಲ್ಲರು ಶಿವನ ಮರೆದರೆ ಕೈಲಾಸ !
ಅಲ್ಲಿ ಹಾಳಕ್ಕು, ಸರ್ವಜ್ಞ ॥ ೧೧೭ ॥

ಅಡವಿಯಲಿ ಮೌನದಿ । ದೃಢವಾಗಿ ತಪವಿದ್ದು ।
ನುಡಿಯಲ್ಲಿ ಶಿವನ ಮರೆದೊಡೆ ಭವ ಬೆನ್ನ !
ಬಿಡದೆ ಹತ್ತಿಹುದು, ಸರ್ವಜ್ಞ ॥ ೧೧೮ ॥

ಏಕಾಂತದಲಿ ಕುಳಿತು ಪಿ । ನಾಕಿಯ ನೆನೆಯದ ।
ಲೋಕದಾ ಮಾತ ನುಡಿವಾತ ಭಟರೊಳಗೆ ।
ತೇಕಾಡುತಿಹನು, ಸರ್ವಜ್ಞ ॥ ೧೧೯ ।

ಹಾಳುಗುಡಿಯಲಿ ಕುಳಿತು | ಜಾಳು ಮಾತನು ಆಡಿ |
ಮೇಲೆ ಶಿವಶಿವಯೆಂದರೆ ಶಿವ ತನ್ನ ತಾನೇ |
ಬೇರಿಹನು, ಸರ್ವಜ್ಞ ॥ ೧೨೦ ॥

ಸತ್ಯವೆಂಬುದು ತಾನು | ಹಿತ್ತಿಲಗಿಡ ನೋಡಾ |
ಮತ್ತೆಲ್ಲಿ ನೋಡಿಯರಸದೆ ತಾನಿರ್ದ |
ಹತ್ತಿಲೇ ನೋಡ. ಸರ್ವಜ್ಞ ॥ ೧೨೧ ॥

ರಾಗ ಯೋಗಿಗೆ ಹೊಲ್ಲ | ಭೋಗ ತಪಸಿಗೆ ಹೊಲ್ಲ |
ಬಿಸಿಯೊಗರುಯೆಣ್ಣೆ ಉಣ ಹೊಲ್ಲ ಯೋಗಿಗೆ |
ಸ್ತುತಿನಿಂದೆ ಹೊಲ್ಲ, ಸರ್ವಜ್ಞ ॥ ೧೨೨ ॥

ಸತ್ಯರ ಚಿತ್ತವನು | ಉತ್ತಮವೆನಬೇಕು |
ಮತ್ತೆ ಶಿವನ ಧ್ಯಾನವುಳ್ಳವರು ಶಿವನಿಂದ |
ಲತ್ತಲೆನಬೇಕು, ಸರ್ವಜ್ಞ ॥ ೧೨೩ ॥

ಮುತ್ತು ನೀರಲಿ ಹುಟ್ಟಿ | ಮತ್ತೆ ನೀರಪ್ಪುದೇ |
ತತ್ತ್ವವನರಿದ ಶಿವಯೋಗಿ ಸಂಸಾರ |
ದತ್ತ ಹೊಂದುವನೆ, ಸರ್ವಜ್ಞ ॥ ೧೨೪ ॥

ತಿಳಿದು ಕಾಸಿದ ತುಪ್ಪ | ವಳಿದು ಹಾಲಪ್ಪುದೇ |
ಕಳೆ ಬೆಳಗನರಿದ ಶಿವಯೋಗಿ ಸಂಸಾರ |
ದೊಳಗೆ ಹೊಂದುವನೆ, ಸರ್ವಜ್ಞ ॥ ೧೨೫ ॥

ಚಿಟ್ಟ ಕರ್ಪೂರ ಬೆಂದು | ಬೊಟ್ಟಿಡಲು ಬೂದಿಲ್ಲ |
ನೆಟ್ಟನೆ ಶಿವನನರಿದಾತ ಸಂಸಾರ |
ಸುಟ್ಟನೆಂದರಿಯೊ, ಸರ್ವಜ್ಞ ॥ ೧೨೬ ॥

ವೈರಾಗ್ಯವೆಂದೆಂಬ | ಕ್ಷೀರಸಾಗರದೊಳಗೆ |
ಆರಾರುಯಿಹರು ಅವರೆಲ್ಲ ಸಂಸಾರ |
ಘೋರಕ್ಕೆ ಹೊರಗು, ಸರ್ವಜ್ಞ ॥ ೧೨೭ ॥

ಜಾತಿಯುಸುತನಳಲು । ಹಾರೈಸಿ ಸತಿಕರಿಯೆಃ ।
ಜಾತಿಯುದ ಕಂಡು ನಗುವಂತೆ ಜ್ಞಾನೀ ।
ಸಂಸಾರಿಯು ನಗುವ, ಸರ್ವಜ್ಞ ॥ ೧೨೮ ॥

ಏನಾದೊಡೇನಯ್ಯಾ । ತಾನಾಗದನಕಾ ।
ತಾನಾಗಿ ತನ್ನನಾದೊಡೆ ಲೋಕ ತಾ ।
ನೇನಾದಡೇನು, ಸರ್ವಜ್ಞ ॥ ೧೨೯ ॥

ಬೊಮ್ಮನನರಿದೊಡೆ । ಸುಮ್ಮನೆ ಇರಬೇಕು ।
ಬೊಮ್ಮನನರಿದು ನುಡಿದರೆ ಕಳ್ಳೊಬಿ ।
ಕೆಮ್ಮಿದಂತಕ್ಕು. ಸರ್ವಜ್ಞ ॥ ೧೩೦ ॥

ಬಲ್ಲೆನೆಂಬರ ಮಾತು । ಯೆಲ್ಲವು ಹುಸಿ ಕಾಣೊ ।
ಬಲ್ಲಡೆ ಬಲ್ಲೆನೆನಬೇಡ ಸುಮ್ಮನಿರು ।
ಬಲ್ಲವನೆ ಬಲ್ಲ, ಸರ್ವಜ್ಞ ॥ ೧೩೧ ॥

ಸಂಣ್ಣಲಾದಿಗಳೊಳಗೆ । ಡೊಂಕು ಬಾಳೆಯು ಹಣ್ಣು ।
ಡೊಂಕುಂಟು ಒಳಗೆ ರುಚಿಯುಂಟು ಸಜ್ಜನರ ।
ಡೊಂಕು ಲೇಸೆಂದ, ಸರ್ವಜ್ಞ ॥ ೧೩೨ ॥

ಸಂಣ್ಣಲಾದಿಗಳೊಳಗೆ । ಕೆಂಪು ಇಟ್ಟೆಯು ಹಣ್ಣು ।
ನುಣ್ಪುಂಟು ಒಳಗೆ ವಿಷವುಂಟು ದುರ್ಜನರ ।
ಸೊಂಪು ಇಂತುಂಟು, ಸರ್ವಜ್ಞ ॥ ೧೩೩ ॥

ದಂತ ಪಂಙ್ತಿಯು ನಡುವೆ । ಯೆಂತಿಕ್ಕು ನಾಲಿಗೆಯು ।
ಅಂತೆ ದುರ್ಜನರ ನಡುವೆ ಸಜ್ಜನರು ಅದ ।
ರಂತೆ ಇರಬೇಕು, ಸರ್ವಜ್ಞ ॥ ೧೩೪ ॥

ಕ್ಷಣಮಾತ್ರವಾದರೂ । ಗುಣಿಗಳೊಡನಾಡುವುದು ।
ಗುಣಹೀನರುಗಳ ಒಡನಾಟ ದುಃಖಕ್ಕೆ ।
ಗಣನೆಯಿಲ್ಲೆಂದ, ಸರ್ವಜ್ಞ ॥ ೧೩೫ ॥

ಕುಂದಿಯದ ಕೂಳಿಂದ । ಹದುಳದಂಬಲಿ ಲೇಸು ।
ಹೃದಯಶೂನ್ಯರ ಒಲವಿಂದ ಬಲ್ಲವರ ।
ಕದನ ಲೇಸೆಂದ, ಸರ್ವಜ್ಞ ॥ ೧೩೬ ॥

ಬಂಧನವ ಮಾಡಿದರು । ಜ್ಞಾನಿಗಳೇ ಲೇಸು ।
ಹೊಂದಿ ಸಾಸಿರವ ಕೂಡುತಿರಲು ಕರ್ಮಿಯ ।
ದಂದುಗವೆ ಬೇಡ, ಸರ್ವಜ್ಞ ॥ ೧೩೭ ॥

ಏನನಾದಡೆ ಕೊಟ್ಟು । ಜ್ಞಾನಿಗಳೊಡನಾಡು ।
ಜ್ಞಾನಿಲ್ಲದವರ ಒಡನಾಟ ಐಪಣವ ।
ನೀನಿತ್ತು ತೊಲಗು, ಸರ್ವಜ್ಞ ॥ ೧೩೮ ॥

ಕೋಟಿಯ ಕೊಟ್ಟರು । ಕೂಟ ಕರ್ಮಿಯ ಹೊಲ್ಲ ।
ನೋಟದಿಂ ನಿಜವ ತಿಳಿದಂತ ಯೋಗಿಯ ।
ಕೂಟವೇ ಲೇಸು, ಸರ್ವಜ್ಞ ॥ ೧೩೯ ॥

ತಂತಿವಾದ್ಯವೆ ಲೇಸು । ಮಂತ್ರಿಗೆಳೆತನ ಲೇಸು ।
ಯಂತ್ರವಾಹಕನ ಕೃಪೆ ಲೇಸು ಯೋಗಿಗೆ ।
ಸ್ವತಂತ್ರವೇ ಲೇಸು, ಸರ್ವಜ್ಞ ॥ ೧೪೦ ॥

ಒಂದೊಂದು ಹನಿಗೂಡಿ । ನಿಂದಲ್ಲಿ ಮಡುವಕ್ಕು ।
ಸಂದ ಸುಜ್ಞಾನಿ ಒಡನಾಡೆ ಪರಬ್ರಹ್ಮ ।
ಮುನ್ನೆ ಬಂದಕ್ಕು, ಸರ್ವಜ್ಞ ॥ ೧೪೧ ॥

ಬಲ್ಲೆನೆಂದೆಂಬುವರು । ಯೆಲ್ಲರು ಹಿರಿಯರೆ ।
ಸೊಲ್ಲಿನ ಭೇದವನರಿತರೆ ಕಿರಿಯ ತಾ ।
ನೆಲ್ಲರಿಗೆ ಹಿರಿಯ, ಸರ್ವಜ್ಞ ॥ ೧೪೨ ॥

ಹೊಲಬನರಿಯದ ಮಾತು । ತಲೆಬೇನೆ ಹಿಡಿದಂತೆ ।
ಹೊಲಬನರಿದೊಂದು ನುಡಿದಡೆ ಅದು ದಿವ್ಯ ।
ಫಲಪಕ್ವದಂತೆ, ಸರ್ವಜ್ಞ ॥ ೧೪೩ ॥

ತಿಂದು ಗಾದಿಯ ಮೇಲೆ । ಬಂದು ಗುರು ಬಿದ್ದಂತೆ ।
ಬಂದು ಪ್ರಸ್ಥಯ ತೊಡಗಿದರೆ ಆ ಮಾತು ।
ವಂದ್ಯನ್ನಬಹುದು, ಸರ್ವಜ್ಞ ॥ ೧೪೪ ॥

ಪ್ರಸ್ಥಯ ನುಡಿದರೆ । ಬೆಚ್ಚಂತೆ ಇ ಬೇಕು ।
ಪ್ರಸ್ಥಯಃ ತಪ್ಪಿ ನುಡಿದರೆ ಹೊತ್ತರಿನಾ ।
ಕಿಚ್ಚು ಕಾದಂತೆ, ಸರ್ವಜ್ಞ ॥ ೧೪೫ ॥

ರಸಿಕರಾಡುವ ಮಾತು । ಶಶಿಯುದಯವಾದಂತೆ ।
ರಸಿಕರಲ್ಲದರ್ಬಿರಿನುಡಿಯು ಕಿವಿಯೊಳ್ ಕೂ ।
ರ್ದಸಿಯು ಬಡೆದಂತೆ, ಸರ್ವಜ್ಞ ॥ ೧೪೬ ॥

ಪಡಲ ಹಿಡಿದಾಡದಿರು । ನುಡಿಯ ಹೋಗಾಡದಿರು ।
ನೆಡೆಯೊಳೆಚ್ಚರವ ಬಿಡದಿರು ಪರಮಾತ್ಮನ ।
ದೃಢವನಗಲದಿರು, ಸರ್ವಜ್ಞ ॥ ೧೪೭ ॥

ಹಂಗಿನ ಹಾಲಿಂದ । ಹಿಂಗದಂಬಲಿ ಲೇಸು ।
ಭಂಗಬಿಟ್ಟುಂಬ ಬಿಸಿಗಿಂತ ಭಿಕ್ಷದ ।
ತಂಗುಳವೆ ಲೇಸು, ಸರ್ವಜ್ಞ ॥ ೧೪೮ ॥

ಒಡಲೆಂಬ ಹುತ್ತಕ್ಕೆ । ನುಡಿವ ನಾಲಿಗೆ ಸರ್ಪ ।
ಕಡುರೋಷವೆಂಬ ವಿಷವೇರೆ ಸಮತಿಗಾ ।
ರುಡಿಗನಂತಕ್ಕು, ಸರ್ವಜ್ಞ ॥ ೧೪೯ ॥

ಹೆಣ್ಣನ್ನು ಹೊನ್ನನ್ನು । ಹಣ್ಣಾದ ಮರಗಳನು ।
ಕಣ್ಣಲ್ಲಿ ಕಂಡು ಮನದಲ್ಲಿ ಬಯಸದಿಹ ।
ಅಣ್ಣಗಳಾರು, ಸರ್ವಜ್ಞ ॥ ೧೫೦ ॥

ಆಡುಗಳು ಆರುಕೋಟಿ । ಕೋಡಗಕೊಂದೇ ದಿನಂ ।
ಕೋಡಗವು ಗೋಟಿನುಡಿರಲ್ಲಿ ಒಳ್ಳಿಹು ।
ಬ್ಬಾಡು ಹೊತ್ತಿಲ್ಲ, ಸರ್ವಜ್ಞ ॥ ೧೫೧ ॥

ಇಷ್ಟಲಿಂಗದಿ ಮನವ । ನೆಟ್ಟನೆ ನಿಲಿಸದೆ ।
ಕಷ್ಟಭ್ರಮೆಯೊಳಗೆ ಮುಳುಗಿರಲು ಕರ್ಮದ ।
ಬಟ್ಟೆಗೆ ಹೋಹ, ಸರ್ವಜ್ಞ ॥ ೧೫೨ ॥

ಕಂಡುಕಂಡವರ ತುಂಡು ತಾ । ಕೊಂಡು ಲಿಂಗವ ಕಟ್ಟಿ ।
ಕೊಂಡಾಡಲರಿಯುಲವರೊಳಗೆ ಆ ಲಿಂಗ ।
ಕೆಂಡದಂತಹುದು, ಸರ್ವಜ್ಞ ॥ ೧೫೩ ॥

ಸೃಷ್ಟಿಯೆಲ್ಲವನು ಮನ । ಮುಟ್ಟುವದು ನಿಮಿಷಕ್ಕೆ ।
ನೆಟ್ಟ ಭಾವನೆಯು ಲಿಂಗ ಮೂರೊಂದಾದವನೆ ।
ಶ್ರೇಷ್ಠನಹನು, ಸರ್ವಜ್ಞ ॥ ೧೫೪ ॥

ಕಟ್ಟಲು ಬಿಟ್ಟಲು ಶಿವ । ಕಟ್ಟಲು ಕರ್ತನೆ ।
ಕಟ್ಟಿದ ಲಿಂಗವನು ಭಜಿಸಿದೊಡೆ ಅವಾಗ ಶಿವ ।
ಬಟ್ಟಬಯಲಕ್ಕು, ಸರ್ವಜ್ಞ ॥ ೧೫೫ ॥

ಅಂಗವನು ಲಿಂಗವನು । ಸಂಗೊವಸಲೆಕ್ಕಂತು ।
ಲಿಂಗದಲಿ ನೆನಹು ಘನವಾಗೆ ಆ ಲಿಂಗ ।
ಅಂಗಮುಕ್ಕು, ಸರ್ವಜ್ಞ ॥ ೧೫೬ ॥

ಒಮ್ಮನದಿ ಶಿವಪೂಜೆ । ಗಮ್ಮನೆ ಮಾಡುವದು ।
ದುಮ್ಮದವಿಡುವದು ಕಡೆ ಬೇಡ ವಿಧಿವಶವು ।
ಸುಮ್ಮನೆ ಕೆಡುಗು, ಸರ್ವಜ್ಞ ॥ ೧೫೭ ॥

ಹಲವನೋದಿದಡೇನು । ಚೆಲುವನಾದೊಡೆಯೇನು ।
ಕುಲವಂತನಾಗಿ ಫಲವೇನು ಲಿಂಗದ ಒಲುಮೆ ।
ಯಿಲ್ಲದವನೇಕೆ, ಸರ್ವಜ್ಞ ॥ ೧೫೮ ॥

ನೊಲೆಯಿಲ್ಲದಾ ಹಾವು । ತಲೆಯಲ್ಲಿ ಕರೆವುದು ।
ಸಲೆನೆಲೆಯಾಗಿ ಕರೆದುಂಬ ಯೋಗಿಯು ।
ಕುಲವೆ ನಾಶನವು, ಸರ್ವಜ್ಞ ॥ ೧೫೯ ॥

ಎತ್ತು ಭಾರವ ಹೊತ್ತು । ಸುತ್ತಿ ಬಂದರೆ ಏನು ।
ಚಿತ್ತದಲಿ ಶಿವನ ನೆನೆಯದೆ ದೇಶವನು ।
ಸುತ್ತಿ ಫಲವೇನು ಸರ್ವಜ್ಞ ॥ ೧೬೦ ॥

ಗಾನವಿದ್ಯವು ಲೇಸು । ಮಾನಿನಿಗೆ ಪತಿ ಲೇಸು ।
ಸ್ವಾನುಭಾವಿಗಳ ಗುಣ ಲೇಸು ಎಲ್ಲಕ್ಕು ನಿ ।
ಧಾನವೇ ಲೇಸು, ಸರ್ವಜ್ಞ ॥ ೧೬೧ ॥

ಕಾಯಕಮಲ ಸಜ್ಜ । ಜೀವರತ್ನವೆ ಲಿಂಗ ।
ಭಾವಪುಷ್ಪದಿ ಶಿವಪೂಜೆಮಾಡುವರ ।
ದೇವರೆಂದೆಂಬೆ, ಸರ್ವಜ್ಞ ॥ ೧೬೨ ॥

ತಾಪಸಂಸಾರದ । ಕೂಪದೊಳು ಬಿದ್ದವರು ।
ಆಪತ್ತನಳಿದು ಪೊರಮಡಲು ಗುರುವಚನ ।
ಸೋಪಾನ ಕಣೊ, ಸರ್ವಜ್ಞ ॥ ೧೬೩ ॥

ಪುಸಿಯುದನ ವ್ಯವಹಾರ । ಕಸಹತ್ತಿದಾರಂಭ ।
ವಿಷಯವುಳ್ಳವನ ಗುರುತನವು ಇವು ಮೂರು ।
ಮಸಿವಣ್ಣ ಕಂಡ್ಯಾ, ಸರ್ವಜ್ಞ ॥ ೧೬೪ ॥

ಭಕ್ತಿಯಿಲ್ಲದ ಶಿಷ್ಯಂಗೆ । ಒತ್ತಿ ಕೊಟ್ಟಾ ಉಪದೇಶ ।
ಬತ್ತಿ ಒಣಗಿದ ಬೈಲಲ್ಲಿ ರಾಜನು ।
ಬಿತ್ತಿ ಬೆಳೆದಂತೆ, ಸರ್ವಜ್ಞ ॥ ೧೬೫ ॥

ಶ್ವಾನ ತೆಂಗಿನಕಾಯಿ । ತಾ ಮೆಲ್ಲಬಲ್ಲುದೇ ।
ಜ್ಞಾನವಿಲ್ಲದವಗೆ ಉಪದೇಶವಿತ್ತರೆ ।
ಹಾನಿ ಕಂಡ್ಯಾ, ಸರ್ವಜ್ಞ ॥ ೧೬೬ ॥

ಕತ್ತೆಯು ಕಿವಿಯಂತೆ । ಬಿತ್ಯಾರು ಬೆಳೆದಾರು ।
ಒತ್ತೊತ್ತಿ ಹೊಗೆಯು ಕುಡಿದಾರು ಜಗವೆಲ್ಲ ।
ಕತ್ತೆಯೆಂದಾರು, ಸರ್ವಜ್ಞ । ೧೬೭ ॥

ನೋಡಿದರೆ ಎರಡೂರು । ಕೂಡಿದಾ ಮಧ್ಯದಲಿ ।
ಮೂಡಿದಾ ಸ್ಮರನ ಮನೆಯಲ್ಲಿ ಜಗ ।
ವೆಲ್ಲ ಜನಿಸಿತು, ಸರ್ವಜ್ಞ ॥ ೧೬೮ ॥

ಕತ್ತಲೆಯ ತಾವಿಂಗೆ । ಉತ್ತಮದ ಜ್ಯೋತಿಯನು ।
ಮತ್ತೆ ಪ್ರಜ್ವಲಿಸಲಾ ತಾವು ಬೆಳಗಾಗಿ ।
ಉತ್ತಮ ಗೋಷ್ಠಿ, ಸರ್ವಜ್ಞ ॥ ೧೬೯ ॥

ಕುಂಡಲಿಯ ಭೇದದ । ಗುಂಡನಾಳದ ನಡುವೆ ।
ಮಂಡಲಿನುತಿರ್ಪ ಹಂಸನ ಹತ್ತಿರ ।
ಕಂಡಿಹ ಸುಳ್ಳು, ಸರ್ವಜ್ಞ ॥ ೧೭೦ ॥

ಕುಂಡಲಿಯ ಸರ್ವನ । ನುಂಡಲ್ಲಿಯಲ್ಲದೆ ।
ಮಂಡಲವು ಮೂರು ತನಗಕ್ಕು ಕಾಲನಿಗೆ ।
ಗಂಡನಾಗಕ್ಕು, ಸರ್ವಜ್ಞ ॥ ೧೭೧ ॥

ಮುತ್ತೊಡೆದು ಹತ್ತಿಕ್ಕು । ಮತ್ತೇನ ಸತ್ತಿಕ್ಕು ।
ಹುತ್ತವನೇರಿ ನರಿ ಕೂಗೆ ಲೋಕಕ್ಕೆ ।
ಕತ್ತಲೆ ಹರಿಯಿತು, ಸರ್ವಜ್ಞ ॥ ೧೭೨ ॥

ಒಳಗಣ ಜ್ಯೋತಿಯ । ಬೆಳಗನರಿಯದಾತಂಗೆ ।
ಬೆಳಗು ಚಿದ್ಬೆಳಗು ಬೆಳಗಾಯಿತೇಳೆಂಬ ।
ಕಳವಳಿಕೇಕೆ, ಸರ್ವಜ್ಞ ॥ ೧೭೩ ॥

ಉತ್ತಮ ಮಾಣಿಕವ । ಬಿತ್ತಿ ಮಂಟಪದೊಳಗೆ ।
ನಿತ್ಯನಿರ್ಮಲದ ನಿಜಗಂಡ ಯೋಗಿಗೆ ।
ಯತ್ತಣದ ಸಾವು, ಸರ್ವಜ್ಞ । ೧೭೪ ॥

ಆತ್ಮದ ಲಿಂಗವನು । ಪ್ರೀತಿಯಿಂದರಿತೊಡೆ ।
ಸೂತಕವಿಲ್ಲ ಭಯವಿಲ್ಲ ಪಂಚಮಹಾ ।
ಪಾತಕವಿಲ್ಲ, ಸರ್ವಜ್ಞ ॥ ೧೭೫ ॥

ನೋಟ ಶಿವಲಿಂಗದಲಿ । ಕೂಟ ಜಂಗಮದಲ್ಲಿ ।
ನಾಟದಾ ಮನವು ಗುರುವಿನ ಕೂಡೆ ಸಂ ।
ಗಾಟವ ನೋಡೋ, ಸರ್ವಜ್ಞ ॥ ೧೭೬ ॥

ನಾದದ ಜಳವಿಡಿದು । ಯೈದಿಸು ಪರಮನನು ।
ಆದಿಯನರಿತು ಸುಖಿಯಾಗು ಜವು ।
ಹಾದಿಗೊಳಬೇಡ, ಸರ್ವಜ್ಞ ॥ ೧೭೭ ॥

ವೇದಶಾಸ್ತ್ರಗಳು । ಓದಿದಡೆ ಫಲವೇನು ।
ವೇಧಿಸವ ಚಿತ್ತ ಸಮರಂಗವಿಲ್ಲದಡೆ ।
ಬೂದಿಯಂತಕ್ಕು, ಸರ್ವಜ್ಞ ॥ ೧೭೮ ॥

ತಿಲ್ಲರಲ್ಲಾಶೆಯ [illegible] । ಟ್ಟಲ್ಲಿಯೆ ಕೈಲಾಸ ।
ಎಲ್ಲವನು ಬಯಸಿ [illegible] ಭ್ರಮಿಸಿದೊಡೆ ನರಕ ।
ತನ್ನಲ್ಲಿಯೆ ನೋಡ, ಸರ್ವಜ್ಞ ॥ ೧೭೯ ॥

ಬಿಂದು ನಾದವ ನುಂಗಿ । ಇಂದು ರವಿಯನು ನುಂಗಿ ।
ಸಂಧಿಗ್ದ ಮನವ ನಿಜ ನುಂಗಿದಾ ಯೋಗಿಯು ।
ಇಂದುಧರನಕ್ಕು, ಸರ್ವಜ್ಞ ॥ ೧೮೦ ॥

ಅರವತ್ತು ಸಿಂಹವರಿ । ಸಿರುವೆಕಚ್ಚಿದಂ ಕಂಡೆ ।
ಮರವೆ ಕೊಂಡೊಡೆದು ಧರೆ ಬೆಂದು ಕೈಲಾಸ ।
ಉರಿವುದ ಕಂಡೆ, ಸರ್ವಜ್ಞ ॥ ೧೮೧ ॥

ಷಡ್‌ದರುಶನಾದಿಗಳು । ವ್ಮೃರ ಮಾಡಲಾದವು ।
ಪೊಡಪಡುತೆ ನಿಗಮವರಿ ಇರವು ಅಭವನ ।
ಗಡಣಕೆಣೆಯೆಂತು, ಸರ್ವಜ್ಞ ॥ ೧೮೨ ॥

ಇಲ್ಲದ ಮಾಯೆಯು । ಇಲ್ಲೆನ್ನಲರಿಯದೆ ।
ಬಲ್ಲೆತು ಮಾಯೆಯೆನಲೇಕೆ ತಿಳಿಯಲ್ಕೆ ।
ಯೆಲ್ಲಿಹುದು ಮಾಯೆ, ಸರ್ವಜ್ಞ ॥ ೧೮೩ ॥

ಅಕ್ಷರವು ಗಣಿತವು । ತರ್ಕಕ್ಕೆ ಗಣಿತಕ್ಕೆ ।
ಮಿಕ್ಕ ಓದುಗಳು ತಿರುಕರಿಗೆ ಮೋಕ್ಷಕ್ಕೆ
ಅಕ್ಷರವೆ ಸಾಕು, ಸರ್ವಜ್ಞ ॥ ೧೮೪ ॥

ಸಾಲುವೇದವನೋದಿ । ಶೀಲವನು ಶುಚಿಯಾಗಿ ।
ಶೂಲಿಯು ಪದ ಮರೆದಡೆ ಗಿಣಿ ಓದಿ ।
ಹೇಲು ತಿಂದಂತೆ, ಸರ್ವಜ್ಞ ॥ ೧೮೫ ॥

ತಾಯಿ ಮಾಳವಿಯಲ್ಲ । ತಂದೆ ವಿಪ್ರನು ಅಲ್ಲ ।
ಚಂದ್ರಶೇಖರನ ವರದಿಂದ ಪುಟ್ಟಿದ ।
ಕಂದ ನಾನೆಂದ, ಸರ್ವಜ್ಞ ॥ ೧೮೬ ॥

ಮಾನೀಶನಿಲ್ಲದೆ । ನೀನೀಶನೆಂತಾದೆ ।
ನೀನೀಶನೀಶನೆನಬೇಡ ಲೋಕಕ್ಕೆ ।
ಮಾನಿಶನೀಶ, ಸರ್ವಜ್ಞ ॥ ೧೮೭ ॥

ಜಾರೆಯು ಸುತನಳಲು । ಹಾರೈಸಿ ಪತಿಕರೆಯೆ ।
ಜಾರೆಯೂ ಪತಿಯು ನಗುವಂತೆ ಜ್ಞಾನಿ ಸಂ ।
ಸಾರಿಯು ನಗುವ, ಸರ್ವಜ್ಞ ॥ ೧೮೮ ॥

ಜ್ಞಾನಿಗು ಅಜ್ಞಾನಿಗು । ತಾನೊಂದು ಕುರುಹುಂಟು ।
ಏನವಜ್ಞಾನಿ ನುಡಿದ ಮತ್ತೆ ಸುಜ್ಞಾನಿ ।
ನುಡಿಯದಿಹನು, ಸರ್ವಜ್ಞ ॥ ೧೮೯ ॥

ಅಕ್ಕಿಬೋನವು ಲೇಸು । ತಕ್ಕವರ ಗೆಣೆಲೇಸು ।
ಪಕ್ಷಿಗಳೊಳಗೆ ಗಿಣಿ ಲೇಸು ಊರಿಗೊಬ್ಬ ।
ಅಕ್ಕಸಾಲೆಯೂ ಲೇಸು, ಸರ್ವಜ್ಞ ॥ ೧೯೦ ॥

ಜಡೆಯು ಕಟ್ಟಲು ಬಹುದು । ಕಡವಶವನುಡಬಹುದು ।
ಬಿಡದೆ ದೇಗುಲದಲ್ಲಿ ಇರಲು ಬಹುದಾ ಕರಣಗಳ ।
ತಡೆದು ನಿಲಲರಿಯದು, ಸರ್ವಜ್ಞ ॥ ೧೯೧ ॥

ಮೂರ್ಖಂಗೆ ಬುದ್ಧಿಯನು । ನೂರ್ಕಾಲ ಹೇಳಿದರೆ ।
ಗೋರ್ಕಲ್ಲ ಮೇಲೆ ಮಳೆಹೊಯಿದಡಾ ಕಲ್ಲು ।
ನೀರ್ಕೊಳ್ಳದಂತೆ, ಸರ್ವಜ್ಞ ॥ ೧೯೨ ॥

ಶೀಗೆ ಬಾಗೆಯ ನಾರು । ಕಾಗಿಮೋರೆಯ ಗಡ್ಡೆ ।
ಸಾಗರದ ನತ್ತು ಒಡಗೂಡಲು ಹೇಮ ।
ಆಗಲೇ ಅಕ್ಕು, ಸರ್ವಜ್ಞ ॥ ೧೯೩ ॥

ಕತ್ತಾರೆ ಹಾಲನು ತಂದು । ಮತ್ತೆ ವಂಗದೊಳೆರೆಯೆ ।
ಉತ್ತಮದ ಲೋಹ ತನಗಕ್ಕು ಲೋಕವೆಲ್ಲಾ ।
ಕತ್ತಲೆಯಂತಕ್ಕು, ಸರ್ವಜ್ಞ ॥ ೧೯೪ ॥

ತನ್ನ ನೋಡಲ್ಕೊಂದು । ಕನ್ನಡಿಯು ಕರವಾದ ।
ತನ್ನಲ್ಲಿ ಜ್ಞಾನವುದಯಿಸಿದ ಮಹಾತ್ಮನು ।
ಕನ್ನಡಿಯಂತಕ್ಕು, ಸರ್ವಜ್ಞ ॥ ೧೯೫ ॥

ಬ್ರಹ್ಮಯೆಂಬುದು ತಾನು । ಇನ್ನೊಮ್ಮರು ನೀಳವೇ ।
ಮೊಮ್ಮ ಸದ್ಗುರುವು ಉಪದೇಶಿಸಲ್ಕೆ ।
ಗಮ್ಮನೆ ಮೋಕ್ಷ, ಸರ್ವಜ್ಞ ॥ ೧೯೬ ॥

ಸತ್ರಿಕರಣಸುರರೊಳು । ಪ್ರಕೃತಿಯುಳಿದಾತ್ಮರೊಳು ।
ಸಕಲರೊಳು ಚಿತ್ತವೆಂದಾರೊಳಾವಾಗ ।
ಸಖತನವೆ ಲೇಸು, ಸರ್ವಜ್ಞ ॥ ೧೯೭ ॥

ಮರಣವೆಂಬುದು ಸತ್ಯ । ಹರನಾಣೆ ಪುಸಿಯಲ್ಲ ।
ತರುಣಿಯರಿಗಿರಿಸೆ ಪರರುಂಬುವರದನರಿತು ।
ಪರರಾಸ್ಥೆಯ್ಯ, ಸರ್ವಜ್ಞ ॥ ೧೯೮ ॥

ಹರಿ ಹಂದಿಯಾದ್ದಂದು । ಹರನು ತಿರಿದುಂಡಂದು ।
ಹರನಜನ ಶಿರವರಿದಂದು ಲಿಖಿತವನು ।
ಬರೆದವರು ಯಾರು, ಸರ್ವಜ್ಞ ॥ ೧೯೯ ॥

ಕೇಡು ಬಹ ಕಾಲಕ್ಕೆ । ಕೂಡುವದು ದುರ್ಬುದ್ಧಿ ।
ಕೋಡಗನು ಲಂಕೆ ಸುಡುವಾಗ ರಾವಣನು ।
ಆಡು ಕಾದಂತೆ, ಸರ್ವಜ್ಞ ॥ ೨೦೦ ॥

ಸರ್ವಜ್ಞನೆಂಬುವನು । ಗರ್ವದಿಂದಾದನೇ ।
ಸರ್ವರೊಳು ಜ್ಞಾನವ ಸಾಧಿಸಿಯೆ ವಿದ್ಯದ ।
ಪರ್ವತವೆ ಆದ, ಸರ್ವಜ್ಞ ॥ ೨೦೧ ॥

ಚಟುಲಲೋಚನೆಯಂತೆ । ಕುಟಿಲಕುಂತಲೆಯಂತೆ ।
ವಿಷವೆಣ್ಣಿನಂತೆ ಹಗಲಿರುಳು ಈ ಬಗೆ ಸಿಂ ।
ಗಟೆ ಕಾಂತೆಯರು, ಸರ್ವಜ್ಞ ॥ ೨೦೨ ॥

ಒಂದಾವಿಗೆಯ ಬಾಡ । ವೊಂದೊಂದು ಭೋಗವನು ।
ಅದರಿಂದುಂಡು ಬಡೆದು ಹೆಚ್ಚಾದಂತೆ ।
ಬಂದಿವನ ದೇಹ, ಸರ್ವಜ್ಞ ॥ ೨೦೩ ॥

ಕಲ್ಲಿನಲಿ ಕುಚದಲ್ಲಿ ಬಳ್ಳಡಲಿ । ಹಿಕ್ಕೆಯಲಿ ।
ಎಲ್ಲಿ ಭಾವಿಪಡಲ್ಲಿಪ್ಪ ನಿಗಮ ।
ಬಲ್ಲವಗೆ ನಿಗಮ, ಸರ್ವಜ್ಞ ॥ ೨೦೪ ॥

## ಈ ಪುಸ್ತಕದ ಕುರಿತು ಎರಡು ಮಾತು

"ಒಂದಾಣೆ ಮಾಲೆ"ಯಲ್ಲಿ, ಈ ಮೊದಲು, "ಸರ್ವಜ್ಞ ವಚನ"ಗಳ ಪ್ರಥಮ ಭಾಗವಾಗಿ, ನಂಬ್ರ 145ನೇ ಪುಸ್ತಕದಲ್ಲಿ 104 ವಚನಗಳನ್ನು ಕೊಟ್ಟಿರುವೆವು. ಈಗ ದ್ವಿತೀಯ ಭಾಗವಾಗಿ 100 ವಚನಗಳನ್ನು ಈ ಪ್ರಕಟಣೆಯಲ್ಲಿ ಕೊಡಲಾಗಿದೆ.

ಸಂಪಾದಕ.

ಪ್ರತಿದಿನ ಉಳಿಸಿರಿ
ಜಾಣತನದಿಂದ ಕೂಡಿಡಿರಿ

ಸೇವಿಂಗ್ಸ್‌ಬ್ಯಾಂಕ್, ಅಲ್ಪಾವಧಿ ಮತ್ತು ನಿಗದಿ ಠೇವಣಾತಿಗಳ ಮೇಲೆ
ಆಕರ್ಷಕ ಬಡ್ಡಿ ದರಗಳು.

ಎಲ್ಲಾ ವಿಧವಾದ ದೇಶೀಯ ಮತ್ತು ವಿದೇಶೀಯ
ವಿನಿಮಯ ವ್ಯವಹಾರಗಳನ್ನು ಕೈಗೊಳ್ಳಲಾಗುವುದು.

ವಿವರಗಳಿಗೆ ನಿಮ್ಮ ಸಮೀಪದ ಶಾಖೆಯ ಮೆನೇಜರರನ್ನು ವಿಚಾರಿಸಿ.

ನಿಮ್ಮ ಉಳಿತಾಯವು ಕೆನರಾ ಬ್ಯಾಂಕಿನಲ್ಲಿ
ಬಹು ಬೇಗನೇ ವೃದ್ಧಿಯಾಗುವುದು.

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ: 1906.)
— ಸರ್ವ ಜನತೆಯ ಬ್ಯಾಂಕ್ —

Edited, Printed & Published by K. V. Shenoy
at The Prabhat Printers Ltd., Mangalore.